
ನೀರಜ್ ಚೋಪ್ರಾ



ಸುಶೀಲಕುಮಾರ್

## ಶೂಟಿಂಗ್‌ನಲ್ಲಿ ಗುರಿ

16 ವರ್ಷದ ಹುಡುಗಿ ಮನು ಭಾಕರ್ ಮತ್ತು 15 ವರ್ಷದ ಅನೀಶ್ ಭಾನವಾಲಾ ಅವರನ್ನೊಳಗೊಂಡ ಶೂಟಿಂಗ್ ತಂಡದಿಂದ ಹೆಚ್ಚು ಪದಕಗಳ ಸಾಧನೆಯ ನಿರೀಕ್ಷೆ ಇದೆ. ಮನು ಮತ್ತು ಅನೀಶ್ ಅವರು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪದಕ ಗೆದ್ದ ಸಾಧನೆ ಮಾಡಿದ್ದರು. ಇವರಲ್ಲದೇ ಅನುಭವಿಗಳಾದ ಹೀನಾ ಸಿಧು, ಶ್ರೇಯಸಿ ಸಿಂಗ್, ಅಪೂರ್ವಿ ಚಾಂಡಿಲಾ ಮತ್ತು ಗಾಯತ್ರಿ ಅವರು ಮಹಿಳೆಯ ಶೂಟಿಂಗ್‌ನಲ್ಲಿ ಚಿನ್ನಕ್ಕೆ ಗುರಿಯಿಡಲು ಸಿದ್ಧರಾಗಿದ್ದಾರೆ.

ಪುರುಷರ ವಿಭಾಗದಲ್ಲಿಯೂ ಉತ್ತಮ ಸ್ಪರ್ಧಿಗಳು ಈ ಬಾರಿ ಇದ್ದಾರೆ. ಅನೀಶ್ ಅತ್ಯಂತ ಕಿರಿಯ ವಯಸ್ಸಿನ ಸ್ಪರ್ಧಿ. ಹರ್ಜಿಂದರ್ ಸಿಂಗ್, ಶಿವಂ ಶುಕ್ಲಾ, ಸೌರಭ್ ಚೌಧರಿ, ದೀಪಕ್ ಕುಮಾರ್ ಅವರಿಂದ ಪದಕದ ನಿರೀಕ್ಷೆ ಇದೆ. ಚೀನಾದ ಬಲಿಷ್ಠ ಶೂಟಿಂಗ್ ಪಡೆಯ ಸವಾಲು ಕೂಡ ಅವರ ಮುಂದೆ ಇದೆ. ಮಿಶ್ರ ವಿಭಾಗದಲ್ಲಿಯೂ ಪದಕ ಸಾಧನೆ ಮೂಡಿಬರುವ ಸಾಧ್ಯತೆ ಇದೆ.

## ಕುಸ್ತಿಯಲ್ಲಿ ಚಿನ್ನ

ಕುಸ್ತಿ ಕಣದ ಹಳೆಯ ಹುಲಿ ಸುಶೀಲ್ ಕುಮಾರ್ ಮೇಲೆ ಎಲ್ಲರ ಕಣ್ಣಿದೆ. ಒಲಿಂಪಿಕ್ಸ್, ಕಾಮನ್‌ವೆಲ್ತ್ ಮತ್ತು ವಿಶ್ವ ಕುಸ್ತಿಗಳಲ್ಲಿ ಪದಕ ಸಾಧನೆ ಮಾಡಿರುವ ಸುಶೀಲ್ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಸಾಧನೆ ಮಾಡುವರೇ ಕಾದು ನೋಡಬೇಕು. 2006ರ ದೋಹಾ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಮೇಲೆಯೇ ಅವರ ಒಳ್ಳೆಯ ದಿನಗಳು ಶುರುವಾಗಿದ್ದವು. 2008ರ ಒಲಿಂಪಿಕ್ಸ್, 2010ರ ಕಾಮನ್‌ವೆಲ್ತ್, 2012ರ ಒಲಿಂಪಿಕ್ಸ್‌ಗಳಲ್ಲಿ ಪದಕಗಳ ಸಾಧನೆ ಮಾಡಿದ್ದರು. 2014 ಮತ್ತು 2010ರ ಏಷ್ಯನ್ ಕೂಟಗಳಲ್ಲಿ ಸಾಧನೆ ಹೇಳಿಕೊಳ್ಳುವಂತಿರಲಿಲ್ಲ. ಸಾಕಷ್ಟು ಸಿದ್ಧತೆಯೊಂದಿಗೆ ವಿದೇಶದಲ್ಲಿ ಕೋಚಿಂಗ್ ಪಡೆಯುತ್ತಿದ್ದಾರೆ. ಪುರುಷರ 74 ಕೆಜಿ ವಿಭಾಗದಲ್ಲಿ ಸ್ಪರ್ಧೆಗಿಳಿಯಲಿದ್ದಾರೆ.

ಬಜರಂಗ್ ಪೂನಿಯಾ, ಸುಮಿತ್ ಮಲಿಕ್, ಪವನ್ ಕುಮಾರ್, ಮೌಸಮ್ ಖತ್ರಿ ಮತ್ತು ಸಂದೀಪ್ ತೋಮರ್ ಅವರು ಬೇರೆ ಬೇರೆ ತೂಕದ ವಿಭಾಗಗಳಲ್ಲಿ ಸ್ಪರ್ಧೆಗಿಳಿಯಲಿದ್ದಾರೆ. ಅವರಲ್ಲಿ ಬಜರಂಗ್ ಮತ್ತು ಪವನ್ ಮೇಲೆ ಹೆಚ್ಚು ನಿರೀಕ್ಷೆ ಇದೆ.

ಆದರೆ ಕುಸ್ತಿಯಲ್ಲಿ ಹೆಚ್ಚು ಪದಕಗಳ ಭರವಸೆ ಇರುವುದು ಮಹಿಳೆಯರ ವಿಭಾಗದಲ್ಲಿ. 62 ಕೆ.ಜಿ. ವಿಭಾಗದಲ್ಲಿ ಸಾಕ್ಷಿ ಮಲಿಕ್ ಮತ್ತು 50 ಕೆ.ಜಿ. ವಿಭಾಗದಲ್ಲಿ ವಿನೇಶ ಫೋಗಟ್ ಅವರು ಈ ಬಾರಿ ಚಿನ್ನದ ಪದಕ ಗೆಲ್ಲುವ ಸಮರ್ಥರು. ಈ ಬಾರಿ ಗೀತಾ ಫೋಗಟ್, ಬಬಿತಾಕುಮಾರಿ ಅವರಿಗೆ ಅವಕಾಶ ಸಿಕ್ಕಿಲ್ಲ. ಪಿಂಕಿ, ಪೂಜಾ ದಂಡೆ, ದಿವ್ಯಾ ಕಕ್ರಾನ್ ಅವರು ಕಣದಲ್ಲಿದ್ದಾರೆ. ತಮ್ಮ ಸಾಮರ್ಥ್ಯ ಒರೆಗೆ ಹಚ್ಚುವ ಅವಕಾಶ ಅವರಿಗೆ ಇದೆ.

## ಬ್ಯಾಡ್ಮಿಂಟನ್‌ನಲ್ಲಿ ಪದಕದ ಬೇಟೆ

ವಿಶ್ವ ಬ್ಯಾಡ್ಮಿಂಟನ್‌ನಲ್ಲಿ ಚೀನಾ, ಕೊರಿಯಾ, ಸ್ಪೇನ್ ಮತ್ತು ಜಪಾನ್ ಪ್ರಾಬಲ್ಯಕ್ಕೆ ತಡೆಯೊಡ್ಡಿದ್ದ ಕೀರ್ತಿ ಭಾರತದ ಬ್ಯಾಡ್ಮಿಂಟನ್ ತಂಡಕ್ಕ ಸಲ್ಲಬೇಕು.

ಪುಲ್ಲೇಲ ಗೋಪಿಚಂದ್ ಮಾರ್ಗದರ್ಶನದಲ್ಲಿ ಸಿದ್ಧವಾಗಿರುವ ಸೈನಾ ನೆಹ್ವಾಲ್, ಪಿ.ವಿ. ಸಿಂಧು, ಕಿದಂಬಿ ಶ್ರೀಕಾಂತ್, ಎಚ್.ಎಸ್. ಪ್ರಣಯ್, ಅಶ್ವಿನಿ ಪೊನ್ನಪ್ಪ, ಸಿಕ್ಕಿರೆಡ್ಡಿ, ಸಾತ್ವಿಕ್ ಸಾಯಿರಾಜ್, ಪ್ರಣವ್ ಜೆರ್ರಿ ಚೋಪ್ರಾ, ಸಮೀರ್ ವರ್ಮಾ ಅವರ ಇತ್ತೀಚಿನ ಸಾಧನೆಗಳು ಭಾರತದ ಕ್ರೀಡಾಪಟುಗಳು ಹೆಮ್ಮೆ ಪಡುವಂತೆ ಮಾಡಿವೆ. ಚೀನಾದಲ್ಲಿ ನಡೆದ ವಿಶ್ವ ಬ್ಯಾಡ್ಮಿಂಟನ್‌ನಲ್ಲಿ ಸಿಂಧು ಬೆಳ್ಳಿ ಗೆದ್ದಿದ್ದರು. ಇದರಿಂದಾಗಿ ಏಷ್ಯನ್ ಕೂಟದ ಪುರುಷ, ಮಹಿಳೆಯರ ಸಿಂಗಲ್ಸ್, ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ಸ್ಪರ್ಧೆಗಳಲ್ಲಿ ಭಾರತಕ್ಕೆ ಪದಕ ಲಭಿಸುವುದು ಖಚಿತ ಎಂದು ವಿಶ್ಲೇಷಿಸಲಾಗುತ್ತಿದೆ. ಅದರಲ್ಲೂ ಏಷ್ಯಾ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಸೈನಾ ನೆಹ್ವಾಲ್, ಸಿಂಧು, ಶ್ರೀಕಾಂತ್ ಅವರ ಆಟವು ರಂಗೇರುವ ಸಾಧ್ಯತೆ ಇದೆ.

## ಅಥ್ಲೆಟಿಕ್ಸ್‌ನಲ್ಲಿ ಹೊಸ ಭರವಸೆ

ಅಸ್ಸಾಂನ ಹೊಸ ಪ್ರತಿಭೆ ಹಿಮಾ ದಾಸ್ ಮತ್ತು ಹರಿಯಾಣದ ನೀರಜ್ ಚೋಪ್ರಾ ಪದಕ ಗೆಲ್ಲುವ ಭರವಸೆ ಮೂಡಿಸಿದ್ದಾರೆ. 20 ವರ್ಷದೊಳಗಿನವರ 400 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದು ದಾಖಲೆ ಬರೆದಿದ್ದ ಹಿಮಾ ದಾಸ್ ಈಗ ಎಲ್ಲರ ಫೇವರಿಟ್ ಆಗಿದ್ದಾರೆ. ಜಾವೆಲಿನ್ ಥ್ರೋನಲ್ಲಿ ನೀರಜ್, ಮೊಹಮ್ಮದ್ ಅನಾಸ್, ಮಹಿಳೆಯರ 200 ಮೀಟರ್ಸ್ ಓಟದಲ್ಲಿ ದ್ಯುತಿ ಚಾಂದ್, 4X400 ಮೀಟರ್ಸ್ ರಿಲೆಯಲ್ಲಿರುವ ಕನ್ನಡತಿ ವಿಜಯಕುಮಾರಿ ಮತ್ತು ತಂಡ. ನಿರ್ಮಲಾ ಶೆರೋನ್ ಭರವಸೆಯ ಅಥ್ಲೀಟ್‌ಗಳಾಗಿದ್ದಾರೆ. ಬಾಕ್ಸಿಂಗ್‌ನಲ್ಲಿ ಮೇರಿ ಕೋಮ್ ಮತ್ತು ಸರಿತಾದೇವಿ ಸ್ಪರ್ಧಿಸುತ್ತಿಲ್ಲ. ಆದರೆ, ಸರ್ಜುಬಾಲಾ ದೇವಿ, ಪೂನಮ್ ಅವರು ಗೆದ್ದರೆ ಪದಕಪಟ್ಟಿಗೆ ಬೋನಸ್ ಸಿಕ್ಕಂತೆ ಸರಿ. ಪುರುಷರ ವಿಭಾಗದಲ್ಲಿ ಶಿವ ಥಾಪಾ, ವಿಕಾಸ್ ಕೃಷ್ಣನ್ ಅವರಿಂದ ನಿರೀಕ್ಷಿಸಬಹುದು.

ಜಿಮ್ನಾಸ್ಟಿಕ್ಸ್‌ನ ಮಹಿಳಾ ವಿಭಾಗದಲ್ಲಿ ಅರುಣಾ ಬುದ್ಧಾರೆಡ್ಡಿ ಮತ್ತು ಪ್ರಣತಿ ನಾಯಕ್ ಮೇಲೆ ಭರವಸೆ ಇದೆ. ಒಲಿಂಪಿಯನ್ ದೀಪಾ ಕರ್ಮಾಕರ್ ಅವರು ಗಾಯಗೊಂಡಿರುವುದರಿಂದ ಸ್ಪರ್ಧಿಸುತ್ತಿಲ್ಲ. ಆರ್ಚರಿಯಲ್ಲಿ ದೀಪಿಕಾ ಕುಮಾರಿ ಮರಳಿರುವುದರಿಂದ ಗೆಲುವಿನ ಕನಸು ಕಾಣಬಹುದು.

**ತಂಡ ವಿಭಾಗದಲ್ಲಿ;** ಅಜಯ್ ಠಾಕೂರ್ ನೇತೃತ್ವದ ಕಬಡ್ಡಿ ತಂಡವು ತಮ್ಮ ಪಾರಮ್ಯವನ್ನು ಉಳಿಸಿಕೊಳ್ಳುವ ಎಲ್ಲ ಸಾಧ್ಯತೆಗಳೂ ಇವೆ. ಆದರೆ ಇತ್ತೀಚಿನ ದಿನಗಳಲ್ಲಿ ಉತ್ತಮವಾಗಿ ಆಡುತ್ತಿರುವ ಕೊರಿಯಾ, ಇಂಡೋನೇಷ್ಯಾ, ಕಜಕಸ್ತಾನ ತಂಡಗಳು ಕಠಿಣ ಪೈಪೋಟಿ ಒಡ್ಡುವುದು ಖಚಿತ. ಈ ಸವಾಲನ್ನು ಮೀರಿ ನಿಲ್ಲಬೇಕಿದೆ.

ಟೇಬಲ್ ಟೆನಿಸ್‌ನಲ್ಲಿ ಮಣಿಕಾ ಬಾತ್ರಾ, ಮೌಮಾ ದಾಸ್, ಅಚಂತ ಶರತ್ ಕಮಲ್, ಸತ್ಯನ್ ಅವರಿರುವ ತಂಡವೂ ಪದಕ ಗೆಲ್ಲುವ ನೆಚ್ಚಿನ ತಂಡವಾಗಿದೆ.

ಆದರೆ ಈ ಬಾರಿಯೂ ಭಾರತ ಒಲಿಂಪಿಕ್ಸ್ ಸಂಸ್ಥೆ (ಐಒಎ) ಒಂದು ಎಡವಟ್ಟು ಮಾಡಿಕೊಂಡಿದೆ. ಕಳೆದ ಮೂರು ವರ್ಷಗಳಲ್ಲಿ ಉತ್ತಮವಾಗಿ ಆಡುತ್ತಿರುವ ಭಾರತದ ಫುಟ್‌ಬಾಲ್ ತಂಡವನ್ನು ಏಷ್ಯನ್ ಕೂಟಕ್ಕೆ ಕಳಿಸುತ್ತಿಲ್ಲ. ಅದರ ಬದಲಿಗೆ ಸಿಲಾಟ್ ಎಂಬ ಸಮರ ಕಲೆ ತಂಡವನ್ನು ಸ್ಪರ್ಧೆಗೆ ಕಳುಹಿಸಲಾಗಿದೆ. ಇದು ಕ್ರೀಡಾ ವಲಯದಲ್ಲಿ ಅಚ್ಚರಿ ಮೂಡಿಸಿದೆ. ಸುನಿಲ್ ಚೆಟ್ರಿ ನಾಯಕತ್ವದ ಫುಟ್‌ಬಾಲ್ ತಂಡವು ಈಗ ಏಷ್ಯಾ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದರೂ ಪರಿಗಣಿಸಿಲ್ಲ.